**ಓ.ಎಸ್. 130/2018 ಪಿ.ಡಬ್ಲೂ-1 ಹೆಸರು – ಶ್ರೀಕಾಂತ ಎಸ್**

**ಸಾಕ್ಷಿಯನ್ನು ದಿನಾಂಕಃ 18.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ವೈ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. 3 ನೇ ವಾದಿ ನನ್ನ ಅಕ್ಕ ಆಗಿದ್ದು ಪಿಯುಸಿ ವರೆಗೆ ವ್ಯಾಸಾಂಗ ಮಾಡಿದ್ದಾರೆ. ನನ್ನ ತಂದೆ ಶ್ರೀನಿವಾಸ ಮೂರ್ತಿ 1988 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮರಣಾನಂತರ ನನ್ನ ತಾಯಿಯೇ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಕುಟುಂಬದ ಒಳಿತಿಗಾಗಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಸಂಬಂಧಿ ಅಲ್ಲ ಎಂದರೆ ಸರಿ. 2005-06 ರಲ್ಲಿ ನಮ್ಮ ಕುಟುಂಬದ ಆದಾಯದ ಮೂಲ ವ್ಯವಸಾಯವಾಗಿತ್ತು. ಒಟ್ಟು ದಾವಾ ಸ್ವತ್ತು ಸೇರಿದಂತೆ 5 ½ ಎಕರೆ ಜಮೀನು ನಮಗೆ ಇತ್ತು. ನಿರಾವರಿ ಜಮೀನು 2 ಎಕರೆ 32 ಗುಂಟೆ ಈಗಲೂ ನಮ್ಮ ಸ್ವಾಧೀನದಲ್ಲಿದೆ ಎಂದರೆ ಸರಿ. ದಾವಾ ಸ್ವತ್ತು ಖುಷ್ಕಿ ಜಮೀನು ಎಂದರೆ ಸರಿ. ದಾವಾ ಸ್ವತ್ತು ಮಳೆಯಾಶ್ರಿತ ಜಮೀನು ಎಂದರೆ ಸರಿ. ನಿ.ಪಿ. 1 ಕ್ಕೆ ನಾನು ಮತ್ತು ಇತರೇ ವಾದಿಗಳು ಓದಿ ತಿಳಿದುಕೊಂಡು ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿ ನಮ್ಮ ತಾಯಿ ಹೇಗೆ ಹೇಳಿದ್ದಾರೋ ಹಾಗೇ ಮಾಡಿದ್ದೇವೆ ಎನ್ನುತ್ತಾರೆ.

ನಿ.ಪಿ. 1 ರಲ್ಲಿ ತಿಳಿಸಿರುವಂತೆ ದಾವಾ ಸ್ವತ್ತನ್ನು ಕೈ ಸಾಲ ತೀರಿಸಲು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ಕೈ ಸಾಲ ಯಾವುದೇ ಇರಲಿಲ್ಲ, ಅಕ್ಕಪಕ್ಕದವರೆಲ್ಲ ಮಾರಾಟ ಮಾಡುತ್ತಿದ್ದು ಮುಂದೆ ಅಲ್ಲಿ ಕಾರ್ಖಾನೆ ಆಗುವುದರಿಂದ ಕೆಲಸ ಸಿಗಬಹುದು ಎಂಬ ಕಾರಣಕ್ಕೆ ಮಾರಾಟ ಮಾಡಲಾಗಿದೆ. ಸದರಿ ವಿಚಾರವನ್ನು ನಿ.ಪಿ. 1 ರಲ್ಲಿ ತಿಳಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದ ವಿಚಾರಗಳೆಲ್ಲ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಚಾರಗಳನ್ನು ನಾನು ನನ್ನ ದಾವೆಯಲ್ಲಿ ತಿಳಿಸಿರುತ್ತೇನೆ ಹಾಗೂ ನನ್ನ ವಕೀಲರಿಗೂ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನಾನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಮಾರಾಟ ಮಾಡಿದ 5-6 ವರ್ಷಗಳ ನಂತರ ಅಲ್ಲಿ ಕೈಗಾರಿಕೆಗಳು ಬರಲು ಪ್ರಾರಂಭವಾಗಿರುತ್ತವೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ನನಗೆ ಪ್ರಾಪಂಚಿಕ ಜ್ಞಾನ

ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಖಂಡಿಕೆ 4 ರಲ್ಲಿ ತಿಳಿಸಿರುವಂತೆ ಹೆಚ್ಚಿನ ಪರಿಹಾರ ಸಿಗುವ ವಿಷಯ ನನಗೆ ತಿಳಿದಿರಲಿಲ್ಲ ಹಾಗೂ ನಮಗೆ ಮೋಸವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಖಂಡಿಕೆ 5 ರಲ್ಲಿ ತಿಳಿಸಿರುವಂತೆ ಭೂ ಸ್ವಾಧೀನಯಾಗುವ ವಿಚಾರವನ್ನು ತಿಳಿಸದೇ ಕತ್ತಲಲ್ಲಿ ಇಟ್ಟು ಮೋಸದಿಂದ ಕ್ರಯ ಪತ್ರ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ನಂತರ 1 ನೇ ಪ್ರತಿವಾದಿ ಅಲ್ಲಿ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಖಂಡಿಕೆ 8 ರಲ್ಲಿ ತಿಳಿಸಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರ ಊರ್ಜಿತವಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದು ಹೆಚ್ಚಿನ ಪರಿಹಾರ ಪಡೆದುಕೊಳ್ಳುತ್ತಾರೆ ಎಂಬ ಹೊಟ್ಟೆಕಿಚ್ಚಿನಿಂದ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**